# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1565 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 21-03-2025 |
| ಉತ್ತರಿಸಬೇಕಾದವರು | : | ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ 'ಕುಡುಬಿ' ಸಮುದಾಯವನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ 'ಕುಡುಬನ್' ಎಂದು ತಪ್ಪಾಗಿ ಹೆಸರು ಉಲ್ಲೇಖಿಸಿದ ಪರಿಣಾಮ ಕಳೆದ 70 ವರ್ಷಗಳಿಂದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಸುಮಾರು 1.25 ಲಕ್ಷ ಮಂದಿ 'ಕುಡುಬಿ' ಸಮುದಾಯದ ಜನರಿಗೆ ಸರ್ಕಾರದ ಸವಲತ್ತುಗಳು ಸಿಗದೇ ಇಂದಿಗೂ ವಂಚಿತರಾಗುತ್ತಾ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | "ಕುಡುಬಿ" ಸಮುದಾಯವನ್ನು ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ:30-03-2002ರ ಆದೇಶದ ಜಾತಿ ಪಟ್ಟಿಯ ಪ್ರವರ್ಗ-1ರ ಕ್ರಮ ಸಂಖ್ಯೆ:30ರಲ್ಲಿ ಸೇರ್ಪಡೆಗೊಳಿಸಲಾಗಿರುತ್ತದೆ.<br><br>ಹಿಂದುಳಿದ ವರ್ಗಗಳ ಪ್ರವರ್ಗ-1ರ ಅಡಿಯಲ್ಲಿ ಬರುವ ಜಾತಿಗಳಿಗೆ ಸಂವಿಧಾನ ಅನುಚ್ಛೇಧ 15(4) ಮತ್ತು 16(4)ರ ಅನ್ವಯ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವ ಶೈಕ್ಷಣಿಕ ಸಂಸ್ಥೆಗಳಲ್ಲಿ ಹಾಗೂ ಉದ್ಯೋಗ ನೇಮಕಾತಿಗಳಲ್ಲಿ ಮೀಸಲಾತಿ ಸೌಲಭ್ಯಗಳನ್ನು ಕಲ್ಪಿಸಲಾಗಿರುತ್ತದೆ. ಅದರಂತೆ ಶೇಕಡ 4ರಷ್ಟು ಮೀಸಲಾತಿ ಸೌಲಭ್ಯವನ್ನು ನೀಡಲಾಗಿದೆ ಮತ್ತು ಪ್ರವರ್ಗ-1ರಲ್ಲಿ ಬರುವ ಸಮುದಾಯಗಳಿಗೆ ಕೆನೆಪದರ ನೀತಿಯಿಂದ ವಿನಾಯಿತಿಯನ್ನು ನೀಡಲಾಗಿರುತ್ತದೆ.<br><br>ಹಿಂದುಳಿದ ವರ್ಗಗಳ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಅಭಿವೃದ್ಧಿ ಯೋಜನೆಗಳಲ್ಲಿ ಪ್ರವರ್ಗ-1ಕ್ಕೆ ಸೇರಿದ ಅಭ್ಯರ್ಥಿ / ಫಲಾನುಭವಿಗಳಿಗೆ ಅರ್ಜಿ ಸಲ್ಲಿಸಲು ಇತರೆ ಹಿಂದುಳಿದ ವರ್ಗಗಳಿಗಿಂತ ಹೆಚ್ಚಿನ ಆದಾಯ ಮಿತಿಯನ್ನು (ರೂ.2.50 ಲಕ್ಷಗಳು) ನೀಡಲಾಗುತ್ತಿರುತ್ತದೆ. ಇದರಿಂದ ಹಿಂದುಳಿದ ವರ್ಗಗಳ ಇತರೆ ಪ್ರವರ್ಗಗಳಿಗೆ (ರೂ.1.00 ಲಕ್ಷಗಳು) ಹೋಲಿಸಿದ್ದಲ್ಲಿ ಪ್ರವರ್ಗ-1ರ ವಿದ್ಯಾರ್ಥಿಗಳಿಗೆ ಹೆಚ್ಚಿನ ಆದ್ಯತೆ ದೊರಕಿದಂತಾಗುತ್ತದೆ.<br><br>ಹಿಂದುಳಿದ ವರ್ಗಗಳಿಗೆ ಸೇರಿದ ಸಂಘ-ಸಂಸ್ಥೆಗಳಿಗೆ ಸಮುದಾಯ ಭವನ / ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕೆ ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದಡಿ ಆಯವ್ಯಯದಲ್ಲಿ ಹಂಚಿಕೆಯಾಗುವ |

| | | |
|---|---|---|
| | | ಅನುದಾನದ ಶೇ.70ನ್ನು ಪ್ರವರ್ಗ-1 ಹಾಗೂ 2ಎ ಸಮುದಾಯಕ್ಕೆ ಹಾಗೂ ಶೇ.30 ನ್ನು ಪ್ರವರ್ಗ-3ಬಿ ಸಮುದಾಯಕ್ಕೆ ಹಂಚಿಕೆ ಮಾಡಲಾಗುತ್ತಿದೆ. (ವಿಶೇಷ ಸಂದರ್ಭದಲ್ಲಿ ಈ ಷರತ್ತನ್ನು ಸಡಿಲಗೊಳಿಸಿ ಸರ್ಕಾರ ಹೆಚ್ಚುವರಿ ಹಂಚಿಕೆ ಮಾಡಬಹುದಾಗಿರುತ್ತದೆ)<br><br>ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 44 ಶಾಸನ 2023, ದಿನಾಂಕ:10.06.2024ರ ಆದೇಶದನ್ವಯ ನಿರ್ಮಾಣ ಕಾಮಗಾರಿಗಳ ಮೌಲ್ಯ ಒಂದು ಕೋಟಿ ರೂಪಾಯಿಗಳಿಗೆ ಮೀರದ ಅಂತಹ ಕಾಮಗಾರಿಗಳ ಸಂಖ್ಯೆಯ ಶೇಕಡ 4 ರಷ್ಟನ್ನು ಮೀರದಂತೆ ಹಿಂದುಳಿದ ವರ್ಗಗಳ ಪ್ರವರ್ಗ-1 ರಡಿ ಬರುವ ಸಮುದಾಯಗಳಿಗೆ ಮೀಸಲಾತಿಯನ್ನು ಕಲ್ಪಿಸಲಾಗುತ್ತಿದೆ.<br><br>ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಯೋಜನೆಗಳಡಿಯಲ್ಲಿ ಪ್ರವರ್ಗ-1 ಮತ್ತು 2ಎ ಗೆ ಶೇಕಡಾ 85% ರಷ್ಟು ಮೀಸಲಾತಿ ಅನುಪಾತವನ್ನು ಅನುಸರಿಸಲಾಗುತ್ತಿದೆ.<br><br>ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>1. ಸ್ವಯಂ ಉದ್ಯೋಗ ನೇರ ಸಾಲ ಯೋಜನೆ.<br>2. ಅರಿವು ಶೈಕ್ಷಣಿಕ ಸಾಲ ಯೋಜನೆ<br>3. ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಸಾಲ ಯೋಜನೆ.<br>4. ಗಂಗಾ ಕಲ್ಯಾಣ ಯೋಜನೆ.<br>5. ಸ್ವಾವಲಂಬಿ ಸಾರಥಿ ಯೋಜನೆ<br>6. ಬ್ಯಾಂಕ್‌ಗಳ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಸಾಲ ಯೋಜನೆ |
| ಆ) | ಬಂದಿದ್ದಲ್ಲಿ 'ಕುಡುಬಿ' ಜನಾಂಗದ ಕುಲಶಾಸ್ತ್ರೀಯ ಅಧ್ಯಯನದ ವರದಿ 2008ರಲ್ಲಿ ಸರ್ಕಾರಕ್ಕೆ ಸಲ್ಲಿಕೆಯಾಗಿದ್ದು, ಅದರಲ್ಲಿ 'ಕುಡುಬಿ' ಸಮುದಾಯವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸುವಂತೆ ಈಗಾಗಲೇ ಶಿಫಾರಸ್ಸು ಮಾಡಲಾಗಿದ್ದರೂ ಸಹ ಸರ್ಕಾರ | ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಪತ್ರ ಸಂಖ್ಯೆ:KU/PLG/DEV/ JCK/2010-11/105/1154 ದಿನಾಂಕ:04.05.2010ರಲ್ಲಿ ಡಾ\|\| ಟಿ.ಟಿ. ಬಸನಗೌಡ, ಪ್ರಿನ್ಸಿಪಾಲ್ ಇನ್‌ವೆಸ್ಟಿಗೇಟರ್, ಡಿ.ಡಿ.ಎಸ್.ಟಿ.ಜಿ.ಕೆ ಪ್ರೊಜೆಕ್ಟ್, ಮಾನವಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರು ಕೈಗೊಂಡ ಕುಡುಬಿ ಜನಾಂಗದ ಕುಲಶಾಸ್ತ್ರೀಯ ಅಧ್ಯಯನದ ವರದಿಯು ಸ್ವೀಕೃತವಾಗಿದೆ. |

| | | |
|---|---|---|
| | ಇದುವರೆಗೆ ಯಾವುದೇ ಕ್ರಮ ಕೈಗೊಳ್ಳದೇ ಇರಲು ಕಾರಣಗಳೇನು: | ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಪತ್ರ ಸಂಖ್ಯೆ: ಟಿ.ಆರ್.ಐ/ಮೈ/ಸಂವಿ/ಸಿಆರ್-33/2014-15, ದಿನಾಂಕ:24.01.2021ರಲ್ಲಿ ಇನ್ಸಿಟ್ಯೂಟ್ ಫಾರ್ ಅಂಡ್ ಎಕನಾಮಿಕ್ ಚೇಂಜ್, ನಾಗರಭಾವಿ, ಬೆಂಗಳೂರು ಇವರ ಮೂಲಕ ಕೈಗೊಂಡಿದ್ದು, ಅವರು ಸಲ್ಲಿಸಿರುವ ಅಧ್ಯಯನದ ಅಂತಿಮ ವರದಿಯು ಸ್ವೀಕೃತವಾಗಿದೆ.<br><br>ಅದರಂತೆ ಕರ್ನಾಟಕ ರಾಜ್ಯದ ಕರಾವಳಿ ಭಾಗದ ಕುಡುಬಿ ಸಮುದಾಯವನ್ನು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸುವ ಕುರಿತು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ. |
| ಇ) | ಯಾವ ಕಾಲಮಿತಿಯೊಳಗೆ 'ಕುಡುಬಿ' ಸಮುದಾಯವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಲಾಗುವುದು? | ರಾಜ್ಯ ಸರ್ಕಾರಕ್ಕೆ ಯಾವುದೇ ಜಾತಿಯನ್ನು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸುವ ಅಧಿಕಾರವಿರುವುದಿಲ್ಲ. ಆದರೆ, ಭಾರತ ಸಂವಿಧಾನದ ಅನುಚ್ಛೇಧ-342ರ ಪ್ರಕಾರ ಯಾವುದೇ ಜಾತಿ / ಉಪ ಜಾತಿಯನ್ನು ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿ ಸೇರಿಸುವ/ ಬದಲಾಯಿಸುವ ಪರಮೋಚ್ಛ ಅಧಿಕಾರ ಭಾರತ ಸರ್ಕಾರಕ್ಕೆ ಮಾತ್ರ ಇರುತ್ತದೆ. |

ಕಡತ ಸಂಖ್ಯೆ:- STW/SECB/SAD/36/2025

(ಟಿ. ರಘುಮೂರ್ತಿ)
ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ